ಹೀಗೆ ಎಲ್ಲರಿಗೆ ಎಲ್ಲರೂ ಆಹಾರವಾಗಿ ಒಂದು ವೃತ್ತ ಪೂರ್ಣಗೊಂಡುದ ಕಂಡು ಬ್ರಹ್ಮ ಸಂತೋಷದಲ್ಲಿದ್ದ ಒಂದು ದಿನ ದೇವತೆಗಳ ಸಮೂಹ ಬ್ರಹ್ಮಲೋಕಕ್ಕೆ ಬಂದು ಮೊರೆಯಿಟ್ಟಿತು. ಭೂಲೋಕದಲ್ಲಿ ಪ್ರಜೆಗಳು ಒಂದು ನುಸಿಯಿಂದ ಬಾಧೆಗೊಳಗಾಗಿದ್ದಾರೆಂದು, ಅದು ಅವರ ಆಸ್ತಿಕತೆಯನ್ನು ನಾಶ ಮಾಡಿ ಎಲ್ಲರನ್ನೂ ನಾಸ್ತಿಕರನ್ನಾಗಿಸುತ್ತಿದೆಯೆಂದು, ಆದಷ್ಟು ಬೇಗ ಇದಕ್ಕೊಂದು ಪರಿಹಾರ ನೀಡಬೇಕು; ಇಲ್ಲದಿದ್ದರೆ ಜನ ನಮ್ಮನ್ನು ಮರೆತು ಬಾಳುವುದನ್ನು ಕಲಿಯುತ್ತಾರೆಂದು, ನಾವು ಆಹಾರವಿಲ್ಲದೆ ಕೃಶರಾಗಬೇಕಾಗುವುದೆಂದು ತಿಳಿಸಿದರು. ಬ್ರಹ್ಮ ತನ್ನ ದಿವ್ಯಜ್ಞಾನದಿಂದ ಎಲ್ಲವನ್ನು ತಿಳಿದುಕೊಂಡು ಧರೆಯ ನರರಿಗೆ ಯಜ್ಞವನು ಕಲಿಸಲೆಂದು ಋತ್ವಿಜರನ್ನು ನಿಯಮಿಸಿದನು. ಋತ್ವಿಜರ ಕೆಲಸವೇನೆಂದರೆ ಬೆಂಕಿಯ ಮೂಲಕ ದೇವತೆಗಳಿಗೆ ಹವಿರ್ಭಾಗವನ್ನು ತಲುಪಿಸುವುದು. ಅಷ್ಟೇ ಅಲ್ಲ, ಆ ಸಂದರ್ಭದಲ್ಲಿ ಏಳುವ ಹೊಗೆಯಿಂದ ಈ ನುಸಿಗಳು ದೂರ ಸರಿದು ಪ್ರಜೆಗಳು ಮಂತ್ರಭಾಗಗಳನ್ನು ಪಠಿಸಲು ಅನುಕೂಲ ವಾತಾವರಣ ಅಲ್ಲ, ಧೂಮಾವರಣ ನಿರ್ಮಾಣವಾಗಿ ಎಲ್ಲವೂ ಸಾಂಗವಾಗಿ ನೆರವೇರಿದಂತಾಗುವುದು ಎಂಬುದು ಬ್ರಹ್ಮದೇವನ ಲೆಕ್ಕಾಚಾರ. ಇದ್ಯಾವ ಕತೆ? ಎಂದು ಕೇಳದಿರಿ. ಒಂದೊಮ್ಮೆ ಕುತೂಹಲ ತಡೆಯಲಾರದೆ ನೀವು ಕೇಳಿದ್ದೇ ಆದರೆ ಅದು ಗರುಡದ ನಂತರ ಬರುವ ನುಸಿ ಎಂಬ ಹತ್ತೊಂಬತ್ತನೆಯ ಪುರಾಣದ, ರೋಮಶ ಮಹರ್ಷಿಗಳು ಹೇಳುವ ಮಶಕಸರ್ಗದ ಕಥೆ ಎಂದು ತಿಳಿಸಬೇಕಾಗುತ್ತದೆ. ಹೀಗೆ ಯಜ್ಞಾಚರಣೆಯು ಹುಟ್ಟಿ ಶತಕಗಳೇ ಸಂದರೂ ಈ ಹುಟ್ಟಿಗೆ ಮಶಕಗಳೇ ಕಾರಣವೆಂದು ನಮ್ಮ ಮನುಷ್ಯರಿಗೆ ಗೊತ್ತಿಲ್ಲದಿರುವುದು ಈ ಕಾಲದ ದುರಂತವೆಂದು ಈ ನುಸಿಪುರಾಣವನ್ನು ಪ್ರವಚಿಸಿದವರೆಲ್ಲ ಕೊನೆಯಲ್ಲಿ ಮಾಡುವ ಸಮ್‌ಅಪ್ ಸಮಾರೋಪದ ಒಟ್ಟು ಸಮ್ಮರಿ... ಹಾಗಾದರೆ ಈ ಭರತಖಂಡದ ಮಶಕದಿಂದಲೇ ಇಂಗ್ಲೆಂಡಿನ ಮಸ್ಕಿಟೋ ಹುಟ್ಟಿರಬಹುದೇ? ಎಂದರೆ, ಇಲ್ಲ ಇಲ್ಲ... ಅದು ಮಾಸ್ ಮತ್ತು ಕೀಟ ಎಂಬ ಆಂಗ್ಲಗನ್ನಡ ಪದಗಳಿಂದ ಹುಟ್ಟಿ ಮಾಸ್‌ಕೀಟವೆಂಬ ಮಾನಿಸಾರಿಯಾಗಿ ನಂತರ ಅರಿಸಮಾಸವಾಗಿ ಪ್ರಸಿದ್ಧವಾಗಿದೆ ಎನ್ನಬಹುದು. ಹೀಗೆ ನುಸಿಯಾವರಣದೊಳಗಿನ ನಸು ಬೆಳಕಿನಲ್ಲಿ ರಚಿಸಿದ ಹುಸಿಪುರಾಣವನ್ನು ಎಲ್ಲರಿಗೂ ಸೆಂಡ್ ಮಾಡಿ ನನ್ನ 'ಸ್ಕ್ರೀನ್ ಟೈಂ' ಅನ್ನು ಸಾರ್ಥಕಪಡಿಸಿಕೊಂಡೆ.

ಮತ್ತೆ ವಿಷಯಕ್ಕೆ ಬರೋಣ. ಈಗ ನಾನು ಮತ್ತು ನನ್ನ ಯಜಮಾನರು ಸರದಿಯಲ್ಲಿ ಪರದೆಯೊಳಗಿನ ಸೊಳ್ಳೆಗಳನು ಕೊಲ್ಲುತ್ತಾ, ಮೊಬೈಲ್ ಹಿಡಿದುಕೊಂಡು ಕಾಲಕ್ಷೇಪ ಮಾಡುತ್ತಾ, 'ಪರದೆ ಸಮಯ'ವನ್ನು ಕಳೆಯುತ್ತಿದ್ದೇವೆ ಎಂದು ಹೇಳಿರುವೆನಷ್ಟೆ. '...ಇದು ಆಧುನಿಕ ಡಿಜಿಟಲ್ ಜೀವನಶೈಲಿ ಕೊಟ್ಟ ಕೊಡುಗೆ...' ಎಂಬ ಡಿಸ್ಕವರಿ ಪತ್ರಿಕೆಯ ವರದಿಯನ್ನೂ ನಿಜಮಾಡುತ್ತಿದ್ದೇವೆ. ರಾಜಾರಾಮ ಭಟ್ರು ಬಂದು ದೇಸೀ ಪುಡಿಯ ದುಡ್ಡು ತೆಗೆದುಕೊಂಡು ದೇಶಾವರಿ ನಗೆ ಚೆಲ್ಲಿ ಹೋದರು. ಇನ್ನೊಂದು ಶುದ್ಧ ದೇಸೀ ಗೋವಿನ ಸಗಣಿಯಿಂದ ಮಾಡಿದ ಕಾಯ್ಲ್ ಇದೆಯಂತೆ. ಮುಂದಿನವಾರ ಬರುವಾಗ ತರುತ್ತೇನೆ ಎಂದು ಹೇಳಲು ಮರೆಯಲಿಲ್ಲ. ಬಾಳೆಕಾಯಿ ಹಣ್ಣಾಗಲು ಉಬ್ಬೆಗೆ ಹಾಕುವಂತೆ ಊದುಬತ್ತಿ ಹಚ್ಚಿ ಮಲಗು... ಮತ್ತೆ ನೋಡು ಸೊಳ್ಳೆ ಬಂದರೆ... ಆಚೆಮನೆ ಆಂಟಿಯ ಬಿಟ್ಟಿ ಸಲಹೆಯೂ ವರ್ಕಾಗದೆ ವರ್ಕ್ ಔಟ್ ಆಯಿತು.

ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎನ್ನುವ ಮಾತಿನಂತೆ, ಈ ಫೆಯರಿ ಏಂಜಲ್‌ಗಳು ತಮ್ಮ ದಿವ್ಯವಾದ ಎಂಜಲಿನಿಂದ ಹಬ್ಬಿಸುವ ಎಲ್ಲಾ ಸೋಂಕುಮಾರಿಗಳನ್ನೂ ನಮ್ಮ ಮಾರಿಗುಡಿಗಳಲ್ಲಿರುವ ಸೀತಾಳಮ್ಮ, ಮಲೇರಿಯಮ್ಮ, ಅಂಗಾಳಮ್ಮ, ಎಲ್ಲಮ್ಮರೇ ನಿವಾರಿಸಬೇಕು. ಆದರೂ ಒಂದು ವಿಷಯಕ್ಕೆ ಎಲ್ಲರೂ ಸಂತೋಷ ಪಡಬೇಕು... ನಾವೆಷ್ಟೇ ಪರದೆ ಅದೂ ಇದೂ ಅಂತ ಪರದಾಡಿದರೂ ಇಲ್ಲಿ ಪೂರ್ಣಪ್ರಮಾಣದ ಮಹಿಳಾ ಸಬಲೀಕರಣ ಆಗಿದೆಯೆಂಬುದನ್ನು ಒಪ್ಪಿಕೊಳ್ಳಲೇಬೇಕು. ರಾತ್ರಿ